ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ

ಎಸ್.ಸಿ. ಸಂಖ್ಯೆ: 1024/2022

ಚಾ.ಸಾ.- 8 ಫ್ರಾಸಾ.- 1

ದಿಃ 31.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ನಾಗರಾಜ ಕೆ. |
| ತಂದೆ ಹೆಸರು | ಕುಮಾರಯ್ಯ |
| ವಯಸ್ಸು | 56 ವರ್ಷ |
| ವೃತ್ತಿ | ಎ.ಎಸ್.ಐ |
| ವಿಳಾಸ | ಹಲಸೂರು ಗೇಟ್ , ಬೆಂಗಳೂರು |

ಮುಖ್ಯವಿಚಾರಣೆ ಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು ಜುಲೈ 2019 ರಿಂದ ಹಲಸೂರು ಗೇಟ್ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2. ದಿಃ 22.12.2019 ರಂದು ನಾನು ಮತ್ತು ಚಾ.ಸಾ-11 ರವರು ಹೊಯ್ಸಳ-31 ರಲ್ಲಿ ಠಾಣಾ ಸರಹದ್ದಿನಲ್ಲಿ ಗಸ್ತು ಕರ್ತವ್ಯವನ್ನು ನಿರ್ವಹಿಸುತ್ತಿದ್ದೆವು. ಸದರಿ ದಿನದಂದು ರಾತ್ರಿ ಸುಮಾರು 12.30 ರ ವೇಳೆಗೆ ಎಸ್.ಆರ್.ನಗರ ಪೋಲೀಸ್ ಠಾಣೆಯ ಹೊಯ್ಸಳ ಸಿಬ್ಬಂದಿಯವರು ವೈರ್ ಲೆಸ್ ಮೂಲಕ ನಮ್ಮನ್ನು ಕೆ.ಬಿ.ರಸ್ತೆ ಬಳಿಗೆ ಬರುವಂತೆ ಕೇಳಿದ್ದರು. ಅದರಂತೆ ನಾವು ಆ

ಸ್ಥಳಕ್ಕೆ ಹೋಗಿ ಸದರಿ ಹೊಯ್ಸಳ ವಾಹನದಲ್ಲಿ ಕರ್ತವ್ಯದಲ್ಲಿದ್ದ ಚಾ.ಸಾ-9 ರವರನ್ನು ಭೇಟಿಯಾಗಿರುತ್ತೇವೆ. ಆ ವೇಳೆಗೆ ಚಾ.ಸಾ-9 ರವರು ನಮಗೆ ಕಂಠೀರವ ಸ್ಟೇಡಿಯಂ ಮುಖ್ಯದ್ವಾರದ ಬಳಿಯಲ್ಲಿ 4-5 ಜನರು ನಿಂತಿರುವುದನ್ನು ತೋರಿಸಿ ಅವರು ಏನೋ ಮಾಡುವಂತೆ ಕಂಡುಬರುವ ಕಾರಣದಿಂದ ನಾವು ಹೋಗಿ ನೋಡಿಬರೋಣ ಎಂದು ತಿಳಿಸಿದ್ದರು. ಅದರಂತೆ ನಾನು, ಚಾ.ಸಾ-9, ಚಾ.ಸಾ-11 ಮತ್ತು ಚಾ.ಸಾ-9 ರವರ ಚಾಲಕ ಸೇರಿ ನಾವೆಲ್ಲರೂ ಕಂಠೀರವ ಸ್ಟೇಡಿಯಂ ಮುಖ್ಯದ್ವಾರದ ಬಳಿಗೆ ಹೋಗುತ್ತಿದ್ದಂತೆ ಅಲ್ಲಿದ್ದ ವ್ಯಕ್ತಿಗಳು ಅಲ್ಲಿಂದ ಓಡಿಹೋಗಲು ಪ್ರಯತ್ನಿಸಿರುತ್ತಾರೆ. ಆ ವೇಳೆಗೆ ಅಲ್ಲಿದ್ದ ಒಬ್ಬ ವ್ಯಕ್ತಿಯು ಆತನ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಹೋಗಬೇಕು ಎನ್ನುವಷ್ಟರಲ್ಲಿ ವಾಹನ ಸಮೇತವಾಗಿ ಬಿದ್ದಿರುತ್ತಾನೆ. ನಾವು ಸದರಿ ವ್ಯಕ್ತಿಯನ್ನು ಹಿಡಿದು ನೋಡಿದಾಗ ಆತನಿಗೆ ಬಿದ್ದು ಏಟಾಗಿರುವುದು ಕಂಡುಬಂದಿರುತ್ತದೆ. ಅದರಂತೆ ನಾವು ಆತನನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

3. ನಾವು ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಆತನ ಹೆಸರು ಇಮ್ರಾನ್ ವಸೀಂ ಶಾಹಿದ್ ಪಾಷಾ ಎಂದು ತಿಳಿದುಬಂದಿರುತ್ತದೆ. ಆ ವೇಳೆಗೆ ಆತನು ಹೊಂದಿದ್ದ ವಾಹನದ ನೊಂದಣಿ ಸಂಖ್ಯೆಯು ಕೆಎ 05 ಸಿಕೆ 7419 Suzuki Access 125 ಆಗಿತ್ತು. ಸದರಿ ವಾಹನದಲ್ಲಿ ಒಂದು ಮಚ್ಚು ಇತ್ತು. ನಾನು ಮತ್ತು ಚಾ.ಸಾ-11 ರವರು ಸದರಿ ವ್ಯಕ್ತಿಯನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಅಲ್ಲಿಗೆ ಚಾ.ಸಾ-9 ಮತ್ತು ಅವರ ಚಾಲಕ

ಬಂದ ನಂತರ ನಾವು ನಮ್ಮ ಕರ್ತವ್ಯಕ್ಕಾಗಿ ನಮ್ಮ ಠಾಣಾ ಸರಹದ್ದಿಗೆ ವಾಪಾಸಾಗಿರುತ್ತೇವೆ. ಸಂಬಂಧಿತ ದಿನದಂದು ಸ್ಥಳದಿಂದ ಓಡಿಹೋಗಿದ್ದ ವ್ಯಕ್ತಿಗಳನ್ನು ಗುರುತಿಸಬಲ್ಲೆ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಆ ವ್ಯಕ್ತಿಗಳಲ್ಲಿ ಓರ್ವ ವ್ಯಕ್ತಿಯಾಗಿದ್ದನು.

4. ಸಂಬಂಧಿತ ದಿನದಂದು ಸ್ಥಳದಲ್ಲಿದ್ದ ವಾಹನದಲ್ಲಿ ಕಂಡುಬಂದಿದ್ದ ಮಚ್ಚನ್ನು ಗುರುತಿಸಬಲ್ಲೆ. ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಸೀಲು ಮಾಡಲಾದ ಸ್ಥಿತಿಯಲ್ಲಿದ್ದ ವಸ್ತುವನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಗುರುತಿಸಿರುವ ಮಚ್ಚನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀಮತಿ ಎನ್.ಜೆ.ಎ., 2 ನೇ ಆರೋಪಿ ಪರ ವಕೀಲರಿಂದ**

5. ನಾವು ಹೊಯ್ಸಳ ವಾಹನದಲ್ಲಿ ಸಂಬಂಧಿತ ಸ್ಥಳಕ್ಕೆ ಹೋಗಿದ್ದೆವು. ನಾವು ಸ್ಥಳಕ್ಕೆ ಹೋಗುವಾಗ ಸೈರನ್ ಬಳಸಿರಲಿಲ್ಲ. ಕಂಠೀರವ ಸ್ಟೇಡಿಯಂ ಸುತ್ತಲೂ ಬೆಳಕಿನ ವ್ಯವಸ್ಥೆ ಇತ್ತು. ಆ ಕಾರಣದಿಂದ ಅಲ್ಲಿ ಇದ್ದ ವ್ಯಕ್ತಿಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದರು ಎಂದರೆ ನಿಜ. ನಾವು ಸ್ಥಳಕ್ಕೆ ಹೋದಾಗ ನಾನು ಸೇರಿದಂತೆ ಒಟ್ಟು 4 ಜನ ಪೋಲೀಸ್ ಸಿಬ್ಬಂದಿಗಳು ಇದ್ದೆವು. ಅಲ್ಲಿ ಇದ್ದ ವ್ಯಕ್ತಿಗಳು ಕೈಗಳಲ್ಲಿ ಏನನ್ನೊ ಹಿಡಿದುಕೊಂಡಿದ್ದರು. ನಾನು ಸ್ಥಳದಿಂದ ಓಡಿಹೋಗಿದ್ದ ವ್ಯಕ್ತಿಗಳನ್ನು ಗಮನಿಸಿದ್ದೆ. ನಾನು ಸದರಿ ವ್ಯಕ್ತಿಗಳನ್ನು ಗುರುತಿಸಬಲ್ಲೆ.

6. 2 ನೇ ಆರೋಪಿಯ ವಿರುದ್ಧ ಕೆ.ಜಿ.ನಗರ ಪೋಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಗೆಂದು ಸದರಿ ವ್ಯಕ್ತಿಯನ್ನು ಕರೆಸಿಕೊಂಡು ಅವರನ್ನು ಈ ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ.

ಸಂಬಂಧಿತ ಸ್ಥಳದಿಂದ ಓಡಿಹೋಗಿದ್ದರು ಎನ್ನಲಾದ ವ್ಯಕ್ತಿಗಳು ಯಾವ ಬಣ್ಣದ ಮತ್ತು ಯಾವ ರೀತಿಯ ಬಟ್ಟೆಗಳನ್ನು ಧರಿಸಿದ್ದರು ಎನ್ನುವ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ನಾನು ಹೇಳಿರುವಂತೆ ಆ ಸ್ಥಳದಿಂದ ವ್ಯಕ್ತಿಗಳು ಓಡಿಹೋಗಿರುವುದನ್ನು ನೋಡದೆ ಇರುವ ಕಾರಣದಿಂದ ಸದರಿ ವಿಚಾರದ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

7. ನಾನು ಹೇಳಿರುವ ರೀತಿಯ ಘಟನೆ ನಡೆದಿಲ್ಲ ಮತ್ತು ಆ ಸ್ಥಳದಲ್ಲಿ 2 ನೇ ಆರೋಪಿಯು ಇದ್ದಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೂ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲೀಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.